Sri H. SIDDEVEERAPPA.— Thank you, Sir. It has already come and it was demonstrated at the Dasara Exhibition.

ಶ್ರೀ ಎಸ್. ಗೋಪಾಲಗೌಡ.—ಜವಾರ್ ಹಲ್ಲರು ಗಳಿಗೆ ಉತ್ತೇಜನ ಕೊಡುವ ದೃಷ್ಟಿಯಿಂದೇನಾದರೂ ಹಳೆಯ ಹಲ್ಲರುಗಳನ್ನು condemn ಮಾಡಬೇಕೆಂದು ಉದ್ದೇಶವಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರಕ್ಕೆ ಅಂಥ ಯಾವ ಉದ್ದೇಶವೂ ಇಲ್ಲ ; ಅಕ್ಕಿ ಜಾಸ್ತಿ ಬರಬೇಕು, ಇಳಿವರಿ ಕಡಮೆ ಬರಬೇಕು, ಅಷ್ಟೆ.

Acquisition of houses of the old Gangammacheri, Bangalore.

Q.—433. Sri B. T. KEMPARAJ (Bangalore South — Scheduled Castes).—

Will the Government be pleased to state :—

(*a*) when the houses of the old Gangammacheri near Town Hall in Bangalore were acquired;

(*b*) in how many stages and for what purposes ;

(*c*) how many persons that lost properties by acquisition have been given sites in exchange ;

(*d*) to how many persons sites have to be yet given ;

(*e*) whether they have thought of any scheme for housing these people ?

A.—Sri T. CHANNIAH (Minister for Public Health and Local Self-Government).—

(*a*) Between the years 1927 and 1944-45.

(*b*) Twelve.

For the construction of Town Hall and to keep the surrounding area open.

(*c*) Thirty-five.

(*d*) This can be known only when the concerned owners, whose properties were acquired, apply for sites and when all the remaining houses are acquired and taken possession of.

(*e*) Yes.

ಶ್ರೀ ಬಿ. ಟಿ. ಕೆಂಪರಾಜ್.—1927ನೆಯ ಇಸವಿಯಿಂದ 1945ರವರೆಗೆ ಆ ಕೇರಿಯಲ್ಲಿ ಎಷ್ಟು ಮನೆಗಳಿದ್ದವು ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಬಿ. ಟಿ. ಕೆಂಪರಾಜ್.— ಅವುಗಳನ್ನು ಅಕ್ವೈರ್ ಮಾಡಬೇಕಾದ ಕಾರಣವೇನಿತ್ತು ?

ಶ್ರೀ ಟಿ. ಚನ್ನಯ್ಯ.— ಕಾರಣವನ್ನು ಉತ್ತರದಲ್ಲಿ ತಿಳಿಸಿದೆ.

ಶ್ರೀ ಬಿ. ಟಿ. ಕೆಂಪರಾಜ್.— 12 ಘಟ್ಟಗಳಲ್ಲಿ ಅಕ್ವೈರ್ ಮಾಡಿದಿರಿ, ಅವರಿಗೆ ಸೈಟುಗಳನ್ನು ಕೊಡುವುದಕ್ಕೆ ಯೋಚನೆ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.— ಉತ್ತರ ಕೊಟ್ಟಿದೆ. ನಂಪಿಗೆ ಕೆರೆಯ ಪಕ್ಕದಲ್ಲಿ ಗಂಗಮ್ಮಚೇರಿಯಲ್ಲಿ ಮನೆಗಳನ್ನು ಕಳೆದುಕೊಂಡವರಿಗೆ ಜಾಗ ಕೊಡಬೇಕೆಂದು ಉದ್ದೇಶಿಸಿದ್ದೇವೆ.

ಶ್ರೀ ಬಿ. ಟಿ. ಕೆಂಪರಾಜ್.— ಅಲ್ಲಿ ಮನೆಗಳನ್ನು ಕಟ್ಟಿಕೊಂಡು ಸ್ವಂತವಾಗಿ ವಾಸ ಮಾಡುತ್ತಿದ್ದಾರೆಯೆ ಅಥವಾ ಬಾಡಿಗೆಯ ಮೇಲೊ ?

ಶ್ರೀ ಟಿ. ಚನ್ನಯ್ಯ.—ಲೀಸ್ ಬೇಸಿಸ್ ಮೇಲೆ ಕೊಡಬೇಕೆಂಬ ಅಭಿಪ್ರಾಯವಿದೆ.

ಶ್ರೀ ಪಿ. ಆರ್. ರಾಮಯ್ಯ.—ಹಳೇಗಂಗಮ್ಮಚೇರಿ ಪ್ರದೇಶದಲ್ಲಿ ಎಷ್ಟು ಮನೆಗಳನ್ನು ಅಕ್ವೈರ್ ಮಾಡಬೇಕೋ ಅಷ್ಟೂ ಅಕ್ವೈರ್ ಆಗಿದೆಯೆ ?

ಶ್ರೀ ಟಿ. ಚನ್ನಯ್ಯ.— ಮಾಡಿದೆ, ಇನ್ನೂ ವಶಕ್ಕೆ ತೆಗೆದುಕೊಂಡಿಲ್ಲ.

ಶ್ರೀ ಪಿ. ಆರ್. ರಾಮಯ್ಯ.— ಎಷ್ಟು ವಶಕ್ಕೆ ಬಂದಿಲ್ಲವೆಂದು ಹೇಳುತ್ತೀರಿ ?

ಶ್ರೀ ಟಿ. ಚನ್ನಯ್ಯ.— 68.

ಶ್ರೀ ಪಿ. ಆರ್. ರಾಮಯ್ಯ.—ಈಗ ಅಲ್ಲಿ ದಕ್ಷಿಣ ಭಾಗದಲ್ಲಿರುವ ಅನೇಕರಲ್ಲಿ, ನಮಗೆ ಬೇರೆ ಕಡೆ ಜಾಗ ಬೇಕಾಗಿಲ್ಲ, ಅಲ್ಲೇ ಸೈಟುಗಳನ್ನು ಮಾಡುವ ಪಕ್ಷದಲ್ಲಿ ಇತರರಿಗೆ ಕೊಡುವ ಖರೀದಿಗೆ ನಾವು ಕೊಂಡುಕೊಳ್ಳಲು ತಯಾರಾಗಿದ್ದೇವೆ ಎಂದು ಎಷ್ಟು ಜನ ಕೇಳಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಪಿ. ಆರ್. ರಾಮಯ್ಯ.—ಹಾಗೆ ಕೊಡುವುದರಲ್ಲಿ ಏನಾದರೂ ಅಭ್ಯಂತರವಿದೆಯೆ ?

ಶ್ರೀ ಟಿ. ಚನ್ನಯ್ಯ.—ಅಲ್ಲರುವ ಜಾಗವನ್ನೆಲ್ಲಾ ಅಕ್ವೈರ್ ಮಾಡಬೇಕೆಂಬ ಉದ್ದೇಶದಿಂದ ಮಾಡಿರುವುದು. ಆ ಸ್ಥಳದಲ್ಲಿ ಜಾಗಕೊಡಬೇಕೆಂಬ ಉದ್ದೇಶದಿಂದಲ್ಲ. ಹಿಂದು ವೇಳೆ ಸೈಟುಗಳನ್ನು ವಿಂಗಡಿಸಿ ಹರಾಜು ಮಾಡಿದರೆ ಅವರೂ ಕೊಂಡುಕೊಳ್ಳಬಹುದು.

ಶ್ರೀ ಪಿ. ಆರ್. ರಾಮಯ್ಯ.—ತಾವು ಎಷ್ಟೋ ಅಕ್ವೈರ್ ಮಾಡಿಕೊಂಡಿದ್ದೀರಿ. ಅದರಲ್ಲಿ ಉಳಿದ ಜಾಗವನ್ನು ಹರಾಜು ಮಾಡುತ್ತೇವೆಂದು ಹೇಳಿದಿರಿ. ಹಾಗೆ ಹರಾಜಿನಲ್ಲಿ ಎಷ್ಟು ಮಾರುತ್ತೀರಿ ಮತ್ತು ಎಷ್ಟು ಇಟ್ಟುಕೊಳ್ಳುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಈಗ ಹಳೇಗಂಗಮ್ಮಚೇರಿ ಇರತಕ್ಕ ಪ್ರದೇಶವನ್ನು ಅಕ್ವೈರ್ ಮಾಡಬೇಕೆಂದು ಸರ್ಕಾರಿ ಆಜ್ಞೆಯಾಗಿದೆ. ಇದರಲ್ಲಿ ಎರಡು ಸೈಟುಗಳನ್ನು ಬೋರ್ಡಿಂಗ್ ಹೋಮಿಗೂ ಇನ್ನೊಂದು ಕ್ಯಾಥೊಲಿಕ್ ಮಿಷನ್ ಚರ್ಚಿಗೂ, ಒಂದನ್ನು ಓರ್ಫನೆಡ್ ಕ್ರಾಸ್ ಕಟ್ಟಡಕ್ಕೂ ಬಿಟ್ಟಿದೆ. ಬಾಕಿ ನಮ್ಮಾರು ಒಂದು ಎಕರೆ ಜಮೀನನ್ನು ಸೈಟುಗಳನ್ನಾಗಿ ವಿಂಗಡಣೆ ಮಾಡಿ ಹರಾಜು ಮಾಡಬೇಕೆಂದಿದೆ.

ಶ್ರೀ ಪಿ. ಆರ್. ರಾಮಯ್ಯ.—ಈಗ ಅಕ್ವೈರ್ ಮಾಡಿಕೊಂಡಿರುವ ಮನೆಗಳವರಿಗೆ ಹಣವನ್ನು ಪಾವತಿ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಪಿ. ಆರ್ ರಾಮಯ್ಯ.—ಇನ್ನೂ ಹಣಪಾವತಿ ಯಾಗದಿರುವ ಅನೇಕರು ಈಗ ಸೈಟಿನಬೆಲೆ ನೂರರಷ್ಟು ಹೆಚ್ಚಾಗಿದೆ, ಆದಕಾರಣ ಈಗಿನ ಮಾರ್ಕೆಟ್ ಬೆಲೆಯನ್ನು ಕೊಡಬೇಕೆಂದು ಕೇಳುವುದು ನ್ಯಾಯ ವಲ್ಲವೆ ?

ಶ್ರೀ ಟಿ. ಚನ್ನಯ್ಯ.—ಹಿಂದೆಯೇ ಅವರಿಗೆ ಅಕ್ವೈರ್ ಮಾಡಬಾಗಲೇ ಅದರ ಕಾಂಪೆಸೇಷನ್ ಇಷ್ಟೆಂದು ತಿಳಿಸಿದೆ. ಹಿಂದೆ ಆದದ್ದನ್ನು ಪುನಃ ಈಗ ಪರಿಶೀಲಿಸಲು ಸಾಧ್ಯವಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಅಕ್ವಿಜಿಷನ್ ಹಣ ಪೂರ್ತಿಪಾವತಿ ಆದರೆ ಅಕ್ವಿಜಿಷನ್ ಪೂರ್ತಿ ಆಯಹಾಗೆ. ಆಗದೇ ಇರುವುದರಿಂದ ಅವರು ಇನ್ನೂ ಆ ಜಾಗವನ್ನು ಬಿಡದೇ ಇರುವುದರಿಂದ.....

Mr. SPEAKER.—You are mixing up too many questions.

Sri P. R. RAMAIYA.—Beg your pardon, Sir.

Mr. SPEAKER.—Please put simple questions.

ಶ್ರೀ ಪಿ. ಆರ್. ರಾಮಯ್ಯ.—ಈಗ ತಾವು ಹಣ ಪಾವತಿಮಾಡಿಲ್ಲವಾದ ಕಾರಣ ಆ ಜಾಗವನ್ನು ಮೊದಲಿಂದಲೂ ಇರತಕ್ಕ ಮಾಲೀಕರಿಗೇ ಕೊಡುವುದರಲ್ಲಿ ಏನು ಅಭ್ಯಂತರ ?

ಶ್ರೀ ಟಿ. ಚನ್ನಯ್ಯ.—ಅವರು ಬೇರೆಸ್ಥಳಕ್ಕೆ ಹೋಗಲು ಸಿದ್ಧವಾಗಿದ್ದಾರೆ. ಹಿಂದೆ ಕನಕನಪಾಳ್ಯಕ್ಕೆ ಅವರು ಹೋಗಬೇಕೆಂದು ಹೇಳಿದೆವು; ಆದರೆ ಅದು ಹೆಚ್ಚುದೂರ, ಅಲ್ಲಿಗೆ ಹೋಗಲು ಕಷ್ಟವಾಗುತ್ತದೆಂದು ಅವರಿಗೆ ಸಿಟಿ ಮಾರ್ಕೆಟ್ಟಿಗೆ ಹತ್ತಿರವಾಗಿ ಜಾಗಕೊಡ ಬೇಕೆಂದು ಅವರ ಕೇರಿಯ ಹತ್ತಿರ ಮುನಿಸಿಪಲ್ ಆಫೀಸ್ ಹಿಂಭಾಗದಲ್ಲಿ ಸೈಟುಗಳನ್ನು ಕೊಡಬೇಕೆಂದು ಯೋಚಿಸಿದ್ದೇವೆ. ಅದಕ್ಕೆ ಅವರೂ ಒಪ್ಪಿಕೊಂಡಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ.—21 ವರ್ಷಗಳಿಂದ ಇದು ಇತ್ಯರ್ಥವಾಗಿಲ್ಲ. ಅವರಿಗೆ ಇನ್ನೂ ಹಣಪಾವತಿ ಯಾಗಿಲ್ಲ. ಆದುದರಿಂದ ಈಗಲಾದರೂ ಸರ್ಕಾರದವರು ತ್ವರಿತವಾಗಿ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಯಾರುಯಾರಿಗೆ ಕಾಂಪೆಸೇಷನ್ ಕೊಟ್ಟಿಲ್ಲವೋ ಅವರಿಗೆ ಜಾಗ್ರತೆಕೊಡಲು ಏರ್ಪಾಡು ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ಪ್ರಶ್ನೆಯಲ್ಲಿ 'for what purpose' ಎಂದು ಕೇಳಿರುವುದಕ್ಕೆ 'for the construction of the Town Hall and to keep the surrounding area open' ಎಂದು ಉತ್ತರ ಹೇಳಿದ್ದೀರಿ. ಆದರೆ ಹೀಗೆ ಅಕ್ವೈರ್ ಮಾಡಿಕೊಂಡಿರುವ ಈ ಜಮೀನನ್ನು ಸೈಟು ಮಾಡಿ ಬೇರೆಯವರಿಗೆ ಹರಾಜು ಮಾಡುವುದೆಂದರೆ ಬೇರೆ ಕಟ್ಟಡಗಳನ್ನು ಕಟ್ಟುವುದಕ್ಕಲ್ಲವೆ ?

ಶ್ರೀ ಟಿ. ಚನ್ನಯ್ಯ.—ಅದರಲ್ಲಿ 1 ಎಕರೆ 18 ಗುಂಟೆಯನ್ನು ರೋಮ್ಯಕ್ಯಾಥಲಿಕ್ ಚರ್ಚಿಗೆ ಕೊಡಬೇಕೆಂದು ಮಾಡಿದೆ. 1¾ ಎಕರೆಯನ್ನು ಶ್ರೀ ಬಿ. ಟಿ. ರಾಮಯ್ಯನವರ ಫ್ರೀ ಬೋರ್ಡಿಂಗ್ ಹೋಮಿಗೂ ಕೊಡಬೇಕೆಂದು ಆಜ್ಞೆಯಾಗಿದೆ. ಮೂರನೆಯದಾಗಿ ರೆಡ್ ಕ್ರಾಸ್ ಆಫೀಸ್ ಕಟ್ಟುವುದಕ್ಕೆ ಸ್ವಲ್ಪಜಾಗ ಕೊಡಬೇಕೆಂದಿದೆ. ಬಾಕಿ ಉಳಿದ 1 ಎಕರೆ 14 ಗುಂಟೆಯನ್ನು ಬಹಿರಂಗ ಹರಾಜುಮಾಡಬೇಕೆಂದಿದೆ.

Sri B. RACHIAH.—The purpose for which the land is acquired is defeated by the action of Government, is it not ?

Sri T. CHANNIAH.—At present the locality is very congested and there are good many ugly houses. ಅವನ್ನೆಲ್ಲಾ ತೆಗೆದು ಹಾಕಿ ಒಳ್ಳೆಯ ಕಟ್ಟಡಗಳನ್ನು ಕಟ್ಟಲು ಏರ್ಪಾಡು ಮಾಡಿದೆ.

ಶ್ರೀ ಬಿ. ರಾಚಯ್ಯ.—ಆದರಲ್ಲಿ ಲೇಔಟ್ ಮಾಡಿದರೆ ಅಲ್ಲಿ. ಒಳ್ಳೆಯ ಮನೆಗಳನ್ನು ಕಟ್ಟಿಕೊಳ್ಳುತ್ತೇವೆಂದು ಅಲ್ಲಿರುವವರೇ ತಿಳಿಸಲಲ್ಲವೆ?

ಶ್ರೀ ಟಿ. ಚನ್ನಯ್ಯ.—ಅಲ್ಲಿ ಚದರಗಜಕ್ಕೆ ಸುಮಾರು 50 ರೂಪಾಯಿಗಳು ಆಗುತ್ತದೆ. ಅವರಿಗೆ ಈಬೆಲೆ ಕೊಡಲು ಶಕ್ತಿಯಿಲ್ಲ. ಅದಕ್ಕೋಸ್ಕರವೆ ನಂಜಿಗೆ ಕೆರೆಯ ಪಕ್ಕದಲ್ಲಿ ಒಂದು ಲಕ್ಷ ಮೂವತ್ತು ಸಾವಿರ ರೂಪಾಯಿ ಖರ್ಚಿದಿಂದ ಸೈಟುಗಳನ್ನು ಮಾಡಿದ್ದೇವೆ.

Village Officers.

Q.—16. Sri T. HANUMAIAH (Hiriyur—Scheduled Castes).—

Will the Government be pleased to state :—

(*a*) the number of Patels, Shanbhogues, Thoties and Talaries in the State (District and Talukwar information to be furnished) ;

(*b*) their duties and payment made to them ?

A.—Sri KADIDAL MANJAPPA (Minister for Revenue and Public Works).—

(*a*) Statement appended below.

(*b*) Their duties are as laid down in Rules 81 to 87 of the Rules under the Mysore Village Offices Act.

Shanbhogues and Patels are paid potgi in accordance with Rule 75 of the Rules under the Village Offices Act.

Thotis and Talaris are paid remuneration called "Miras" in kind, *i.e.*, in the shape of Agricultural produce. (See Rules 79 and 80 of the Rules under the Village Offices Act).